**ಅ. ದಾ. ಸಂ. 158/2022**

**ಡಿ. ಡಬ್ಲ್ಯೂ - 02**

**ದಿನಾಂಕ: 11.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ವಾದಿಯ ಪರ ಶ್ರೀ. ಆರ್. ಎಸ್, ವಕೀಲರಿಂದ:-**

**01.** ನ್ಯಾಯಾಲಯದ ಮುಂದೆ ಇರುವ ವಾದಿಯು ಯಾವ ವಿಳಾಸದಲ್ಲಿ ವಾಸಿಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಹೆಂಡತಿ ಮತ್ತು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಪ್ರತಿವಾದಿಯು ನಿಮಗೆ ಸಂಬಂಧಿಕರು ಮತ್ತು ಅವರ ಬಗ್ಗೆ ನಿಮಗೆ ಚನ್ನಾಗಿ ಗೊತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ನಿಮ್ಮ ಸಂಬಂಧಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಇದೇ ಮೊದಲ ಬಾರಿಗೆ ಇಂದು ನ್ಯಾಯಾಲಯದಲ್ಲಿ ನೀವು ವಾದಿಯನ್ನು ನೋಡುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 2ನೇ ಕಂಡಿಕೆಯಲ್ಲಿ ಹೇಳಿರುವ ವ್ಯಕ್ತಿಗಳು ನಾನು ಚಿಕ್ಕವನು ಇದ್ದಾಗಲೇ ಮೃತ ಪಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಮೂದಿಸಿರುವ ಸಂಬಂಧದ ವಿಷಯಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಮಾನ್ಯ ತಹಶೀಲ್ದಾರವರಿಂದ ಪಡೆದುಕೊಂಡಿರುವ ವಂಶವೃಕ್ಷ ಪ್ರಮಾಣಪತ್ರದ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನೀವು ನ್ಯಾಯಾಲಯಕ್ಕೆ ಸದರಿ ವಂಶವೃಕ್ಷ ಪ್ರಮಾಣಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

02. ಸರ್ವೆ ನಂ. 89ರಲ್ಲಿ ಒಟ್ಟು ಎಷ್ಟು ಪೋಡಿಯಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತನಾದ ದಾಸಬೋವಿ ಮತ್ತು ಅವರ ತಮ್ಮನಾದ ತಿಮ್ಮಬೋವಿಯವರಿಗೆ ಸರ್ವೆ ನಂ.89ರಲ್ಲಿ ಜಮೀನು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಾತ ಮತ್ತು ಅವರ ತಮ್ಮನ ನಡುವೆ ಮೌಖಿಕವಾಗಿ ವಿಭಾಗ ಆಗಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಸಂಬಂಧಪಟ್ಟಿರುವ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 4ನೇ ಪ್ಯಾರಾದಲ್ಲಿ ಹೇಳಿರುವ ದಾಸಪ್ಪ

ಬಿನ್ ಚಿಕ್ಕ ಗಂಗಯ್ಯನವರಿಗೆ 1960ನೇ ಇಸವಿಯಲ್ಲಿ ವಿಭಾಗ ಆಗಿ ಸ್ವತ್ತು ಬಂದಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ 4ನೇ ಪ್ಯಾರದಲ್ಲಿ ಹೇಳಿರುವ ಸಂಬಂಧಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ನಾನು ಕಳೆದ ಬಾರಿ ಸಾಕ್ಷಿ ಹೇಳಲು ಬಂದಾಗ ಈ ಮೇಲೆ ಹೇಳಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 6ನೇ ಪ್ಯಾರಾದಲ್ಲಿ ವಾದಿಯು ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳಿರುತ್ತೇನೆ ಮತ್ತು ಸದರಿ ವಿಷಯದ ಬಗ್ಗೆ ನನಗೆ 6 ತಿಂಗಳುಗಳ ಹಿಂದೆ ಗೊತ್ತಾಯಿತು ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನೀವು ಪ್ರತಿವಾದಿಗೆ ಸಂಬಂಧಿಯಾಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಇಂದು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾಸ್ತವವಾಗಿ ಇಲ್ಲದೇ ಇರುವ ವಿಷಯವನ್ನು ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಮೂದಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಪ್ರತಿವಾದಿಯು ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**

ಅ. ದಾ. ಸಂ. **158/2022**

ಡಿ.ಡಬ್ಲ್ಯೂ - **03**

**ದಿನಾಂಕ: 11.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ವಾದಿಯ ಪರ ಶ್ರೀ. ಆರ್. ಎಸ್, ವಕೀಲರಿಂದ:-**

**01.** ಇಂದು ನ್ಯಾಯಾಲಯದಲ್ಲಿ ಡಿ. ಡಬ್ಲ್ಯೂ-2ರವರ ಪಾಟೀ ಸವಾಲು ನಡೆಯುವ ಸಮಯದಲ್ಲಿ ನೀವು ನ್ಯಾಯಾಲಯದ ಒಳಗಡೆಯೇ ಇರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ ಮತ್ತು ನಾನು ಸಾಕ್ಷಿ ಹೇಳಲು ಪ್ರತಿವಾದಿಯ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸರ್ವೆ ನಂ.89 ಎಷ್ಟು ಪೋಡಿಯಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯ ಹೆಸರಿನಲ್ಲಿ ಸರ್ವೆ ನಂ.89/1ರಲ್ಲಿ ಎಷ್ಟು ಸ್ವತ್ತು ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ದಾವಾಸ್ವತ್ತಿನ ಸರ್ವೆ ನಂ.89/1 ಆಗಿದೆ, ಅದರ ವಿಸ್ತೀರ್ಣ 10 ಗುಂಟೆ ಇರಬಹುದು ಮತ್ತು ಅದರ ಚೆಕ್ಕು ಬಂಧಿ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 3ನೇ ಪ್ಯಾರದಲ್ಲಿ 2021 ನೇ ಇಸವಿಯಲ್ಲಿ ತತ್ಕಾಲ್ ಪೋಡಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ಹೇಳಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ.

02. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 4ನೇ ಪ್ಯಾರಾದಲ್ಲಿ 2022ನೇ ಇಸವಿಯಲ್ಲಿ ಕುದೂರು ಪೋ. ಠಾಣೆಗೆ ನೀಡಿರುವ ದೂರಿನ ಬಗ್ಗೆ ಹೇಳಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಚಿಕ್ಕವನು ಆಗಿದ್ದಾಗಿನಿಂದಲೂ ನನಗೆ ಪ್ರತಿವಾದಿಯ ಪರಿಚಯವಿದೆ ಮತ್ತು ನಮ್ಮಿಬ್ಬರ ನಡುವೆ ಒಳ್ಳೆಯ ಬಾಂಧವ್ಯ ಇದೆ. ಪ್ರತಿವಾದಿಯು ನಿಮ್ಮ ಪರಿಚಯಸ್ತರಾಗಿರುವ ಕಾರಣದಿಂದ ನೀವು ಅವ ರಿಗೆ ಸಹಾಯ ಮಾಡುವ ಉದ್ದೇಶದಿಂದ ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಪ್ರತಿವಾದಿ ಮತ್ತು ಚಿಕ್ಕಗಂಗಯ್ಯನವರ ಮಗನಾದ ದಾಸಪ್ಪನವರು ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಯಾರು ಮಾಲೀಕರು ಆಗಿರುತ್ತಾರೆ ಅವರ ಹೆಸರಿಗೆ ಖಾತೆ ಮತ್ತು ಪಹಣಿ ಬರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 7ನೇ ಪ್ಯಾರಾದಲ್ಲಿ ನಾನು ನನ್ನ ತಂದೆಯ ಹೆಸರಿನಲ್ಲಿ ಇದ್ದ ಸ್ವತ್ತನ್ನು ವಾದಿಯು ಅವರ ಹೆಸರಿಗೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಹೇಳಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮತ್ತು ಡಿ.

ಡಬ್ಲೂ-2ರವರ ತಂದೆ ಬೇರೆ ಬೇರೆ ಆಗಿರುತ್ತಾರೆ. ವಾದಿಯೇ ದಾವಾಸ್ವತ್ತಿನ ಸ್ವಾಧೀನದಲ್ಲಿ ಇದ್ದರೂ ನೀವು ಪ್ರತಿವಾದಿಗೆ ಸಹಾಯ ಮಾಡುವ ಉದ್ದೆಶದಿಂದ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**